ನೇರವಾಗಿ ನೋಡಲು ಅವಳಿಗೆ ಆಗುತ್ತಿರಲಿಲ್ಲ. ನನ್ನೊಳಗೆ ಆಗುತ್ತಿದ್ದ ಆನಂದವನ್ನು ಶಬ್ದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ನಾನು ಎಲ್ಲೋ ಸೋತು ಹೋಗಿದ್ದವನು ಮತ್ತೆ ಅಲ್ಲಿಯೇ ಗೆದ್ದುಬಿಟ್ಟೆ ಎನಿಸಿತು. ನಾವು ಹೊರಗೆ ಬಂದಾಗ ಅವಳ ಕೈಯ್ಯನ್ನು ಗಟ್ಟಿಯಾಗಿ ಹಿಡಿದುಕೊಂಡೆ. ಅವಳೂ ಅದಕ್ಕೆ ಪ್ರತಿಸ್ಪಂದಿಸಿದಳು. ಇಬ್ಬರೂ ಸುಮಾರು ಹೊತ್ತು ಹಾಗೆಯೇ ನಿಂತಿದ್ದೆವು.

'ಸರಿ ಲೇಟಾಗುತ್ತೆ.. ಹೊರಡೋಣ..' ಎಂದಳು. ಇಬ್ಬರೂ ಹೊರಟೆವು. ನಾನು ರೂಮಿಗೆ ಹೋದಾಗ ಊಟ ತಿಂಡಿ ಏನೂ ಬೇಡವಾಗಿತ್ತು. ಮನಸ್ಸಿನಲ್ಲಿ ಸಂತಸದ ಅಲೆಗಳೇ ತುಂಬಿಕೊಂಡಿದ್ದವು.

ಅದಾದ ಮುಂದಿನ ವಾರ ಊರಿಗೆ ಹೋಗಿ ತಡಮಾಡದೆ ಅಮ್ಮನಿಗೆ 'ಸೀಮಾಳನ್ನು ಮದುವೆಯಾಗಬೇಕೆಂದಿದ್ದೇನೆ, ಅವಳಿಗೂ ಒಪ್ಪಿಗೆಯಿದೆ' ಎಂದು ವಿಷಯ ತಿಳಿಸಿದೆ. ಅಮ್ಮನಿಗೆ ಇನ್ನಿಲ್ಲದ ಸಂತಸವಾಯಿತು. 'ಅದೇ ಸುಬ್ಬೂ ನಾದಿನಿ ತಾನೇ.. ಆಗಬಹುದು.. ಆಗಬಹುದು.. ಅವಳ ನಡೆನುಡಿ ಚೆನ್ನಾಗಿದೆ.. ಹೈದರಾಬಾದಿನಲ್ಲಿಯೇ ನೋಡಿಬಿಟ್ಟೆ.. ನಮ್ಮ ಮನೆಗೆ ಹೊಂದಿಕೊಂಡು ಹೋಗುವಂತಹ ಹುಡುಗಿ..' ಎಂದು ತುಂಬಾ ಖುಷಿಯಿಂದ ಸೀಮಾಳನ್ನು ತಾರೀಫು ಮಾಡಿದಳು.

* * *

ನಾನು ಮತ್ತು ಸೀಮಾ ಮದುವೆಯಾಗಿ ನಮ್ಮೂರಿನಲ್ಲಿಯೇ ನೆಲೆಸಿದ್ದೇವೆ. ನಮ್ಮ ಪ್ರೇಮದ ಕುಡಿಯ ನಿರೀಕ್ಷೆಯಲ್ಲಿದ್ದೇವೆ. ಅಮ್ಮ ಸುಖವಾಗಿದ್ದಾಳೆ. ಮೊಮ್ಮಗುವಿಗಾಗಿ ಕಾತುರದಿಂದ ಕಾಯುತ್ತಿದ್ದಾಳೆ. ಸುನಿಲ್ ಸಾರ್ ಮತ್ತು ಶರಧಿಯಕ್ಕ ಇಬ್ಬರೂ ನಮ್ಮ ಕುಟುಂಬದ ಆತ್ಮೀಯ ಸ್ನೇಹಿತರಾಗಿದ್ದಾರೆ.

ನನಗೆ ಒಮ್ಮೊಮ್ಮೆ ಎಲ್ಲೋ ಒಂದು ಭಗ್ನಪ್ರೇಮದ ದುರಂತ ಪ್ರಕರಣವನ್ನು ಪತ್ರಿಕೆಗಳಲ್ಲಿ ಓದಿದಾಗಲೋ, ಟೀವಿ ವಾರ್ತೆಗಳಲ್ಲಿ ಕೇಳಿದಾಗಲೋ ಅತೀವ ಬೇಸರವಾಗುತ್ತದೆ. ಚಾರ್ಲಿ ಚಾಪ್ಲಿನ್ ಹೇಳಿರುವಂತೆ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ನಮ್ಮ ಕಷ್ಟಗಳೂ ಕೂಡ.. ಎಂಬ ವಾಕ್ಯವನ್ನು ನಾನು ಆಗಾಗ ನೆನಪು ಮಾಡಿಕೊಳ್ಳುತ್ತೇನೆ. ಭಗ್ನಪ್ರೇಮವೆಂಬುದು ಒಂದು ತಾತ್ಕಾಲಿಕ ಮನಸ್ಥಿತಿ ಅಷ್ಟೇ. ಅದರಿಂದ ಆ ಕ್ಷಣದಲ್ಲಿ ಹತಾಶರಾಗಿ ವಿಸ್ತಾರವಾದ ನಮ್ಮ ಬದುಕನ್ನು ಮೊಟಕುಗೊಳಿಸಿಕೊಳ್ಳುವ ಅಥವಾ ಹಾಳು ಮಾಡಿಕೊಳ್ಳುವ ಯಾವ ಪ್ರಯತ್ನವನ್ನೂ ಮಾಡಬಾರದು. ಕಾಲ ಎಲ್ಲವನ್ನೂ ಮರೆಸುತ್ತದೆ ಎನ್ನುವ ನನ್ನ ಅಮ್ಮನ ಮಾತು ಎಂದೆಂದಿಗೂ ಸತ್ಯವಾದುದು ಎಂದು ನನ್ನ ಬದುಕಿನಿಂದಲೇ ಸಾಬೀತಾಗಿದೆ. ಪ್ರೀತಿ ಎಂಬುದು ಅಕ್ಷಯ ಪಾತ್ರೆಯಿದ್ದಂತೆ. ಅದಕ್ಕೆ ಎಂದಿಗೂ ಸಾವಿಲ್ಲ. ನಾವು ಒಬ್ಬರಿಗೆ ಪ್ರೀತಿಯನ್ನು ನೀಡಲು ಸಾಧ್ಯವಾದರೆ ಅದೇ ಪ್ರೀತಿಯನ್ನು ಮತ್ತೊಬ್ಬರಿಗೂ ನೀಡಲು ಸಾಧ್ಯ ಎಂಬ ಆತ್ಮವಿಶ್ವಾಸ ನಮ್ಮದಾಗಬೇಕೆಂಬುದೇ ನನ್ನ ಅನಿಸಿಕೆ. ನನ್ನ ಸ್ನೇಹಿತ ಅಪ್ಪಾಜಿಯ ನಿನ್ನನ್ನು ಕೂಡುವ ಹೆಣ್ಣು ಈ ಪ್ರಪಂಚದಲ್ಲಿ ಎಲ್ಲೋ ಒಂದು ಕಡೆ ಸೃಷ್ಟಿಯಾಗಿರುತ್ತಾಳೆ ಎನ್ನುವ ತತ್ವಸಿದ್ಧಾಂತವೂ ಮತ್ತು ಏನಾಗಬೇಕೆಂಬುದು ಆಗೇ ಆಗುತ್ತದೆ.. ನಮ್ಮಿಂದ ತಡೆಯಲು ಆಗೋದಿಲ್ಲ.. ಆಗೋದೆಲ್ಲಾ ಒಳ್ಳೆಯದಕ್ಕೆ.. ಎನ್ನುವ ಮಾಯಿಯ ಹಣೆಬರಹದ ಸಿದ್ಧಾಂತ ಎರಡೂ ನನ್ನ ಪಾಲಿಗೆ ನಿಜವಾಗಿವೆ.

(ಮುಗಿಯಿತು)


# ಮುಂದಿನವಾರ..ಹೊಸ ಧಾರಾವಾಹಿ

ವಿರಕ್ತರಂತೆ ಜೀವಿಸುವ ಅಪ್ಪ–ಮಗ,
ಮನೆಯ ಕೊಠಡಿಯನ್ನೇ
ಅನಾಥಾಶ್ರಮವನ್ನಾಗಿ ಮಾಡಿಕೊಂಡ
ನರಹರಿ, ಸ್ವಂತ ತಮ್ಮನನ್ನೇ ಕೊಲೆ ಮಾಡಿ
ಜೈಲು ಸೇರಿದ ಅಮರೇಶ.. ಈ ಮೂವರ
ಬದುಕಿನ ಹೊಯ್ದಾಟಗಳ ನೈಜ ಚಿತ್ರಣ..



**ಖ್ಯಾತ ಕಥೆಗಾರ**
**ಕೆ.ಟಿ.ಗಟ್ಟಿ ಅವರ**
**ಹೊಸ ಸೃಷ್ಟಿ**

## ಮೋಹಚುಂಬಿತ ಮಾಯೆ

**ಪುಟ ಪುಟದಲ್ಲೂ ಕುತೂಹಲ**